**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 113/2025 **RW**-1

**ದಿಃ04.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 1 ಮತ್ತು 2 ನೇ ಎದುರುದಾರ ಪರ ವಕೀಲರಾದ ಶ್ರೀ ಎ ಬಿ ಪಿ ರವರಿಂದ.**

ನಾನು 1 ನೇ ಎದುರುದಾರ ಪರ ಸಾಕ್ಷಿದಾರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಧಿಕಾರ ಪತ್ರ ಹಾಗೂ ನೋಟರಿಯವರು ದೃಢೀಕರಿಸಿದ ಐಡಿ ಕಾರ್ಡನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಶಾನೆ ಆರ 1 ಮತ್ತು ನಿಶಾನೆ ಆರ 2 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀ ಆರ ಎಚ ಕೆ ರವರಿಂದ.**

ದಿಃ01-05-2024 ರಂದು ನಾನು ಕರ್ತವ್ಯದ ಮೇಲೆ ಇದ್ದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ದಿವಸ ನಾನು ಕೆಎಸಆರಟಿಸಿ ಬಸ್ಸ ಸಂಖ್ಯೆ ಕೆಎಃ22/ಎಫ/2170 ಇದನ್ನು ಚಾಲನೆ ಮಾಡುತ್ತಿದ್ದೆ ಎಂದರೆ ಸರಿ. ಆ ದಿವಸ ನಾನು ರಾಮದುರ್ಗ ಕಡೆಯಿಂದ ಹುಬ್ಬಳ್ಳಿಗೆ ಬರುತ್ತಿದ್ದೆ ಎಂದರೆ ಸರಿ. ಅಮ್ಮಿನಬಾವಿ ಗ್ರಾಮದ ಹತ್ತಿರ ಬಸ್ಸನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಎತ್ತಿನ ಗಾಡಿಗೆ ಡಿಕ್ಕಿ ಹೊಡೆದಿರುತ್ತೇನೆಂದರೆ ಸಾಕ್ಷಿ ನಾನು ನಿಧಾನವಾಗಿಯೇ ಚಲಾಯಿಸಿಕೊಂಡು ಬರುತ್ತಿದ್ದೆ ಸದರಿಯವರು ಎತ್ತಿನಗಾಡಿಯನ್ನು ರಾತ್ರಿ ಸಮಯದಲ್ಲಿ ಹೊಡೆದುಕೊಂಡು ಹೋಗುತ್ತಿದ್ದರು ಆಗ ಎದುರುಗಡೆಯಿಂದ ಲಾರಿ ಬಂದಿದ್ದು ಲಾರಿಗೆ ಹೆದರಿ ಎತ್ತುಗಳು ಅಡ್ಡಾ ಬಂದವು, ಆಗ ಡಿಕ್ಕಿ ಆಯಿತು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಆ ದಿನ ಜೋರಾಗಿ ಓಡಿಸಿಯೆ ಮುಂದೆ ಹೋಗುತ್ತಿದ್ದ ಎತ್ತಿನ ಗಾಡಿಗೆ ಡಿಕ್ಕಿ ಹೊಡೆಸಿರುತ್ತೇನೆ ಆದರು ತಪ್ಪಿಸಿಕೊಳ್ಳುವ ಸಲುವಾಗಿ ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮೇಲೆ ಗಾಯಾಳು ದೂರು ಕೊಟ್ಟಿರುತ್ತಾರೆಂದರೆ ಸರಿ. ಪೋಲೀಸರು ತನಿಖೆ ಮುಗಿಸಿ ನಮ್ಮ ಮೇಲೆ ಆರೋಪ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸರಿ. ನಮ್ಮ ಮೇಲೆ ಧಾರವಾಡದ ಜೆಎಂಎಫಸಿ ನ್ಯಾಯಾಲಯದಲ್ಲಿ ಅಪಘಾತಕ್ಕೆ ಸಂಬಂದಿಸಿದಂತೆ ಕೇಸ ಚಾಲ್ತಿಯಲ್ಲಿದೆ ಎಂದರೆ ಸರಿ.

ನನ್ನದೆ ತಪ್ಪು ಇರುವ ಕಾರಣ ಪೋಲೀಸರು ನನ್ನ ಮೇಲೆ ಆರೋಪ ಪಟ್ಟಿ ಸಲ್ಲಿಸಿದ್ದರು ನನ್ನ ತಪ್ಪು ಇಲ್ಲ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಪಘಾತಪಡಿಸಿದ್ದರಿಂದ ಅರ್ಜಿದಾರರಿಗೆ ಸಾಕಷ್ಟು ಪೆಟ್ಟಾಗಿದ್ದವು ಎಂದರೆ ಸಾಕ್ಷಿ ಇಲ್ಲ ಅದು ಸುಳ್ಳು ಎನ್ನುತ್ತಾರೆ. ನನ್ನ ನಿರ್ಲಕ್ಷತೆ ಇದೆ ಎಂದು ಕೆಎಸಆರಟಿಸಿಯಲ್ಲಿ ಇನಕ್ವೇರಿ ಆಗುತ್ತದೆ ಎಂಬ ಕಾರಣಕ್ಕೆ ನಾನು ನನ್ನ ತಪ್ಪು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ವಿಚಾರಗಳನ್ನು ನಮ್ಮ ಇಲಾಖೆಯಿಂದ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಬರೆಸಿ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಅರ್ಜಿದಾರರ ಮೇಲೆ ಯಾವುದೇ ದೂರು ಕೊಟ್ಟಿಲ್ಲವೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

(ಸರ್ವಮಂಗಳ.ಕೆ.ಎಂ)
1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ